**2ನೇ ಅಧಿಕ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಲಯ, ಹಾಸನ,**

**ಎಸ್.ಸಿ.ನಂಃ-173/2018**

ಪಿ.ಡಬ್ಲ್ಯೂಃ- 7

ಸಿ.ಡಬ್ಲ್ಯೂಃ- 9

| | | |
|---|---|---|
| ಸಾಕ್ಷಿದಾರರ ಹೆಸರುಃ | : | ಡಾಃ ಗೋಪಾಲಕೃಷ್ಣ |
| ತಂದೆಯ ಹೆಸರುಃ | : | ಲೇಟ್ ಹೆಚ್ ಸಿ ಗುಂಡೂರಾವ್ |
| ವಯಸ್ಸುಃ | : | 71 ವರ್ಷ |
| ವೃತ್ತಿಃ | : | ನಿವೃತ್ತ ವೈದ್ಯಾಧಿಕಾರಿಗಳು |
| ವಾಸಃ | : | ಹಾಸನ. |

**ದಿನಾಂಕಃ 20-11-2025 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ ಸರ್ಕಾರಿ ಅಭಿಯೋಜಕರಿಂದಃ**

ನಾನು 2007 ರಿಂದ 2021 ರವರೆಗೆ ನಾನು ಹಾಸನದ ಸರ್ಕಾರಿ ಆಸ್ಪತ್ರೆಯಲ್ಲಿ ವೈದ್ಯಾಧಿಕಾರಿಯಾಗಿ ಕಾರ್ಯ ನಿರ್ವಹಿಸಿರುತ್ತೇನೆ.

2. ದಿನಾಂಕಃ 28.11.2016 ರಂದು ಬೆಳಿಗ್ಗೆ 8.20 ಗಂಟೆ ಸಮಯದಲ್ಲಿ ಒಂದು ಹಲ್ಲೆಯ ಚರಿತ್ರೆಯ ಬಗ್ಗೆ ಗಾಯಾಳು ಪರಮೇಶ ರವರನ್ನು ಪರೀಕ್ಷಿಸಿದಾಗ ಈ ಕೆಳಕಂಡ ಗಾಯ ಕಂಡು ಬಂತು.

1. ಗಾಯಾಳುವಿನ ತಲೆಬುರುಡೆಯ ಎಡಭಾಗದಲ್ಲಿ ಒಂದು ಹರಿದ ಗಾಯ 8X2X1 ಸೆಂ ಮಿ ವಿಸ್ತಾರದಲ್ಲಿ ಇರುವುದು ಕಂಡು ಬಂತು.

3. ಗಾಯಾಳುವಿಗೆ ಆಗಿದ್ದ ಗಾಯ ಸಾಮಾನ್ಯ ಸ್ವರೂಪದ ಗಾಯ ಆಗಿತ್ತು. ಈ ಬಗ್ಗೆ ಗಾಯಾಳುವನ್ನು ಪರೀಕ್ಷಿಸಿ ಗಾಯದ ದೃಢೀಕರಣ ಪತ್ರವನ್ನು ನೀಡಿರುತ್ತೇನೆ. ಸಾಕ್ಷಿದಾರರು ಗುರುತಿಸಿದ ಗಾಯದ ದೃಢೀಕರಣ ಪತ್ರವನ್ನು ನಿಪಿ–4 ಎಂದು ಗುರುತಿಸಲಾಯಿತು. ಸಾಕ್ಷಿದಾರರು ಗುರುತಿಸಿದ ಅವರ ಸಹಿಯನ್ನು ನಿಪಿ–4(ಎ) ಎಂದು ಗುರುತಿಸಲಾಯಿತು. ನ್ಯಾಯಾಲಯದ ಮುಂದೆ ನೋಡುತ್ತಿರುವ ಮುಮಾ–2 ಮಚ್ಚಿನಿಂದ ಹಲ್ಲೆ ನಡೆಸಿದ್ದಲ್ಲಿ ಮೇಲೆ ಕಾಣಿಸಿದ ಗಾಯ ಸಂಭವಿಸುವ ಸಾಧ್ಯತೆ ಇರುತ್ತದೆ.

**ಪಾಟೀ ಸವಾಲುಃ ಆರೋಪಿತರ ಪರ ವಕೀಲರಿಂದಃ**

4. ನಾನು ಗಾಯಾಳುವಿಗೆ ಯಾವುದೇ ಚಿಕಿತ್ಸೆ ನೀಡಿಲ್ಲ ಎಂದರೆ ನಾನು ಪ್ರಥಮ ಚಿಕಿತ್ಸೆ ನೀಡಿರುತ್ತೇನೆ. ಗಾಯಾಳುವಿಗೆ ಮುಂದಿನ ಚಿಕಿತ್ಸೆಯನ್ನು ಸರ್ಜರಿ ಡಿಪಾರ್ಟ್ ಮೆಂಟ್ ನವರು ನೀಡಿರುತ್ತಾರೆ. ನಾನು ಗಾಯಾಳುವಿಗೆ ಚಿಕಿತ್ಸೆ ನೀಡಿರುವ ಬಗ್ಗೆ ಪೊಲೀಸರಲ್ಲಿ ಕೇಸ್ ಶೀಟನ್ನು ನೀಡಿಲ್ಲ ಹಾಗೂ ಈ ದಿನ ನ್ಯಾಯಾಲಯಕ್ಕೆ ತಂದಿಲ್ಲ. ಎಂ ಎಲ್ ಸಿ ರಿಜಿಸ್ಟರಿನಲ್ಲಿ ಪ್ರಥಮ ಚಿಕಿತ್ಸೆಯನ್ನು ಯಾರು ನೀಡುತ್ತಾರೆ ಎಂಬುದನ್ನು ಬರೆಯುವುದಿಲ್ಲ. ಎಂ ಎಲ್ ಸಿ ರಿಜಿಸ್ಟರಿನಲ್ಲಿ ಪ್ರಥಮ ಚಿಕಿತ್ಸೆ ನೀಡಿರುವ ಬಗ್ಗೆ ಮಾಹಿತಿ ಇದ್ದು ವೈದ್ಯರ ಹೆಸರು ಹಾಗೂ ಸಹಿ ಇರುತ್ತದೆ ಎಂದರೆ ಸರಿ. ನಾನು ಎಂ ಎಲ್ ಸಿ ರಿಜಿಸ್ಟರನ್ನು ನ್ಯಾಯಾಲಯಕ್ಕೆ ನೀಡಿಲ್ಲ. ನಿಪಿ–4 ರಲ್ಲಿ ಗಾಯದ ವಯಸ್ಸನ್ನು ನಮೂದಿಸಿಲ್ಲ ಎಂದರೆ ಸರಿ. ಒಬ್ಬ ವ್ಯಕ್ತಿಗೆ ಇಬ್ಬರು ವ್ಯಕ್ತಿಗಳು ದೊಣ್ಣೆ ಹಾಗೂ ಮಚ್ಚಿನಿಂದ ಏಕ ಕಾಲಕ್ಕೆ ಹೊಡೆದಲ್ಲಿ Multiple injuries ಆಗುವ ಸಂಭವ ಇರುತ್ತದೆ ಎಂಬ ವಕೀಲರ ಪ್ರಶ್ನೆಗೆ ಸಾಕ್ಷಿದಾರರು ಸಂಭವಿಸುವ ಸಾಧ್ಯತೆ ಇರುತ್ತದೆ ಎಂದು ಉತ್ತರಿಸುತ್ತಾರೆ. ನಾನು ನರರೋಗ ತಜ್ಞನಲ್ಲ. ಗಟ್ಟಿಯಾದ ನೆಲದ ಮೇಲೆ ಬಿದ್ದಲ್ಲಿ

ಹರಿದ ಗಾಯ ಆಗುತ್ತದೆ ಎಂದರೆ ಸರಿಯಲ್ಲ. ಚೂಪಾದ ಅಂಚಿನ ಮೇಲೆ ಬಿದ್ದಲ್ಲಿ ಹರಿದ ಗಾಯ ಸಂಭವಿಸುವ ಸಾಧ್ಯತೆ ಇರುತ್ತದೆ ಎಂದರೆ ಸರಿ. ಪೊಲೀಸರ ಹೇಳಿಕೆ ಮೇರೆಗೆ ನಿಪಿ-4 ಗಾಯದ ದೃಢೀಕರಣ ಪತ್ರವನ್ನು ನೀಡಿರುತ್ತೇನೆಂದರೆ ಸರಿಯಲ್ಲ. ನಾನು ಗಾಯಾಳುವಿಗೆ ಯಾವುದೇ ರೀತಿಯ ಚಿಕಿತ್ಸೆ ನೀಡಿಲ್ಲ ಎಂದರೆ ಸರಿಯಲ್ಲ.

**ಮರು ವಿಚಾರಣೆ: ಇಲ್ಲ**

(ಸಾಕ್ಷಿಯ ಸಾಕ್ಷ್ಯವನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)

ಓ.ಹೇ.ಕೇ.ಸರಿ ಇದೆ.

2ನೇ ಅಧಿಕ ಜಿಲ್ಲಾ ಮತ್ತು ಸೆಷನ್ಸ್
ನ್ಯಾಯಾಧೀಶರು, ಹಾಸನ.